ಮೊದಲೇ ಅದು ಇತ್ತು. ಮೊದಲೇ ಮಾಡಬೇಕಾಗಿತ್ತು, ಅವರು ಮಾಡಲಿಲ್ಲ. ಈಗ ತಂದಿದ್ದೇವೆ. ದಯಮಾಡಿ ಇದಕ್ಕೆ ಒಪ್ಪಿಗೆ ನೀಡಬೇಕು ಎಂದು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ 1993ರ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 :

ಅಧ್ಯಕ್ಷರು : "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ:

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ "ಮೊದಲನೇ ಖಂಡ ಹೆಸರು ಮತ್ತು ಅವತರಣಿಕೆ ಈ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾಪವನ್ನು ಅಂಗೀಕರಿಸಲಾಯಿತು

(ಮೊದಲನೆ ಖಂಡ, ಹೆಸರು ಮತ್ತು ಅವತರಣಿಕೆ ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಚೌಡರೆಡ್ಡಿ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) : 1993ರ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ "1993ರ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಖಂಡ :2

1993ರ ಕರ್ನಾಟಕ ಮಾನುಗಾರಿಕೆ ಬಂದರು ಸರಹದ್ದು ಪ್ರಾಧಿಕಾರ (ತಿದ್ದುಪಡಿ) ವಿಧೇಯಕ ಪರ್ಯಾಲೋಚನಾ ಪ್ರಸ್ತಾವ

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರುಗಳ ರಾಜ್ಯ ಸಚಿವರು):

ಮಾನ್ಯ ಅಧ್ಯಕ್ಷರೆ , 1993ರ ಕರ್ನಾಟಕ ಮೀನುಗಾರಿಕೆ ಬಂದರು ಸರಹದ್ದು

ಪ್ರಾಧಿಕಾರ(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಿಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಇದು ಬಹಳ ಪ್ರಮುಖವಾದಂಥ ವಿಧೇಯಕವಾದುದರಿಂದ ಇದನ್ನು ನಾಳೆ ಚರ್ಚೆಗೆ ತೆಗೆದುಕೊಳ್ಳ ಬಹುದು.

* ಶ್ರೀ ವಸಂತ ವಿ. ಸಾಲಿಯಾನ (ಮಾನುಗಾರಿಕೆ ಮತ್ತು ಬಂದರುಗಳ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ , ಕರ್ನಾಟಕ ಮಾನುಗಾರಿಕೆ ಬಂದರು ಸರಹದ್ದು ಪ್ರಾಧಿಕಾರ ಅಧಿನಿಯಮ 1986ಕ್ಕೆ 20ನೇ ಏಪ್ರಿಲ್ 1990ರಂದು ರಾಷ್ಟ್ರಪತಿಯವರು ಅನುಮತಿ ಕೊಟ್ಟಿದ್ದಾರೆ, ಮತ್ತು ಈ ಅಧಿನಿಯಮವನ್ನು ದಿನಾಂಕ 12.2.1993ರಂದು ಕರ್ನಾಟಕ ರಾಜ್ಯಪತ್ರದಲ್ಲಿ ಅಧಿಕೃತವಾಗಿ ಪ್ರಕಟಿಸಲಾಗಿದೆ. ಈ ಪ್ರಾಧಿಕಾರದ ಮುಖ್ಯ ಉದ್ದೇಶವೇನೆಂದರೆ, ಮಾನುಗಾರಿಕೆ ಬಂದರಿನ ಸರಹದ್ದುಗಳನ್ನು ಅಭಿವೃದ್ದಿಗೊಳಿಸುವುದು, ಸಂರಕ್ಷಿಸುವುದು, ನಿಯಂತ್ರಿಸುವುದು, ಮಾನುಗಾರಿಕೆಯ ಯಾಂತ್ರಿಕ ದೋಣಿಗಳು ಮತ್ತು ಅಲ್ಲಿಂದ ಹೊರಡುವಾಗ ಸೌಕರ್ಯ ಕ್ರಮಗಳನ್ನು ಅಳವಡಿಸುವುದು ಹಾಗೂ ಯಾಂತ್ರಿಕ ದೋಣಿಗಳು ತಂದ ಮಾನುಗಳನ್ನು ಮಾರಾಟ ಮಾಡುವುದು, ಇತ್ಯಾದಿ. ಈ ಅಧಿನಿಯಮ 2(ಡಿ)ಯಲ್ಲಿ ಮಾನುಗಾರಿಕೆ ಬಂದರಿನ ಸರಹದ್ದು ಎಂದರೆ ರಾಜ್ಯ ಸರ್ಕಾರದ ಮಾನುಗಾರಿಕೆ ಬಂದರಿನ ಸರಹದ್ದು ಪ್ರದೇಶವೆಂದು ಅಧಿಸೂಚಿಸ ಬಹುದಾದಂಥ ಯಾವುದೇ ಪ್ರದೇಶ ಅಂದರೆ ಕೇಂದ್ರ ಗೃಹ ಇಲಾಖೆಯವರು ದಿನಾಂಕ 30.5.1988ರಂದು ರಾಜ್ಯ ಸರ್ಕಾರದ ಕಾನೂನು ಇಲಾಖೆಗೆ ಪತ್ರ ಬರೆದು ಕರ್ನಾಟಕ ಮಾನುಗಾರಿಕೆ ಬಂದರಿನ ಸರಹದ್ದು ಪ್ರಾಧಿಕಾರ ಅಧಿನಿಯಮ 1986ಕ್ಕೆ ರಾಜ್ಯ ದೊಡ್ಡ ಬಂದರನ್ನು ಹೊರತುಪಡಿಸಿ ಮತ್ತು ಮುಂದೆ ರಾಜ್ಯ ಸರ್ಕಾರ ಘೋಷಿಸುವ ಯಾವುದಾದರೊಂದು ದೊಡ್ಡ ಬಂದರನ್ನು ಅಥವಾ ಕಟ್ಟುವ ದೊಡ್ಡ ಬಂದರುಗಳನ್ನು ಈ ಅಧಿನಿಯಮದಿಂದ ಹೊರತುಪಡಿಸಬೇಕೆದು ಸಲಹೆ ಸೂಚಿಸಿದ್ದರು ಹಾಗೂ ನೌಕಾಪಡೆಯ ಪ್ರತಿನಿಧಿ ಒಬ್ಬರನ್ನು ಪ್ರಾಧಿಕಾರದ ಸದಸ್ಯರನ್ನಾಗಿ ನೇಮಿಸಬೇಕೆಂದು ಸಲಹೆ ಕೊಟ್ಟರು. ಆ ಕಾರಣ ಈ ತಿದ್ದುಪಡಿ ತರಲು ಉದ್ದೇಶಿಸಲಾಗಿದೆ.

ಅಧ್ಯಕ್ಷರು: ಪ್ರಸ್ತಾಪ ಏನೆಂದರೆ, "1993ರ ಕರ್ನಾಟಕ ಮಾನುಗಾರಿಕೆ ಬಂದರು ಸರಹದ್ದು ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು "

ಪ್ರಸಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು ಮತ್ತು ಖಂಡ 2 ಮತ್ತು 3

ಅಧ್ಯಕ್ಷರು : "ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ "

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಮತ್ತು 3 ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ :

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "ಮೊದಲನೆ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರುಗಳ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ 1993ರ ಕರ್ನಾಟಕ ಮೀನುಗಾರಿಕೆ ಬಂದರು ಸರಹದ್ದು ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸ ಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "1993ರ ಕರ್ನಾಟಕ ಮೀನುಗಾರಿಕೆ ಬಂದರು ಸರಹದ್ದು ಪ್ರಾಧಿಕಾರ(ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

1993-94ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ

* ಶ್ರೀ ವೀರೇಂದ್ರ ಪಾಟೀಲ್ : (ಚಿಂಚೋಳಿ) ಸನ್ಮಾನ್ಯ ಅಧ್ಯಕ್ಷರೆ , ತಮ್ಮ ಮತ್ತು ಸದನದ ಅನುಮತಿಯನ್ನು ಕೋರಿ ನಾನು ಕುಳಿತುಕೊಂಡೇ ಮಾತನಾಡುತ್ತಿದ್ದೇನೆ. ಏಕೆಂದರೆ ನನಗೆ ಇನ್ನೂ ಕೂಡ ನಿಂತು ಮಾತನಾಡುವುದಕ್ಕೆ ಆಗುವುದಿಲ್ಲ, ಆದಕ್ಕಾಗಿ ತಾವೆಲ್ಲರೂ ಕೂಡ ನನಗೆ ಕುಳಿತುಕೊಂಡು ಮಾತನಾಡಲು ಅನುಮತಿಯನ್ನು ನೀಡಬೇಕೆಂದು ವಿನಂತಿ ಮಾಡಿಕೊಳ್ಳುತಿದ್ದೇನೆ.

ಮಾನ್ಯ ಸಭಾಧ್ಯಕ್ಷರೆ, ತಮ್ಮ ಚುನಾವಣೆ ಅವಿರೋಧವಾಗಿ ಆದಾಗ ನಾನು ಸದನಕ್ಕೆ ಬಂದಿರಲಿಲ್ಲ, ಆದಕ್ಕಾಗಿ ಇವತ್ತು ತಾವು ಅವಿರೋಧವಾಗಿ ಈ ಸದನದ ಅಧ್ಯಕ್ಷರಾಗಿ ಆಯ್ಕೆಯಾದುದಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಮತ್ತು ನನ್ನ ಪರವಾಗಿ ತಮ್ಮನ್ನು ಸ್ವಾಗತಿಸುತ್ತೇನೆ. ಅನೇಕ ವರ್ಷಗಳಿಂದ ಪಾರ್ಲಿಮೆಂಟರಿಯಲ್ಲಿ ಮತ್ತು ಸ್ಟೇಟ್ ಲೆಜಿಸ್‌ಲೇಚರ್‌ನಲ್ಲಿ ಇರುವ ಅನೇಕ ಸದಸ್ಯರುಗಳು ಒಂದು ಮಾತನ್ನು ಹೇಳುತ್ತಾರೆ. ಎಲ್ಲಾ ಸದಸ್ಯರು ಹೇಳುತ್ತಾರೆಂದಲ್ಲ, ಕೆಲವು ಸದಸ್ಯರುಗಳು ಹೇಳುತ್ತಾರೆ. ಅದನ್ನು ನಾವು ಪತ್ರಿಕೆಗಳಲ್ಲಿ ಓದುತ್ತಿದ್ದೇವೆ. ಅದೇನೆಂದರೆ ವರ್ಷಗಳು ಉರುಳಿದಂತೆ ಪಾರ್ಲಿಮೆಂಟ್ ಮತ್ತು ಲೆಜಿಸ್‌ಲೇಚರ್‌ನ ಗುಣಮಟ್ಟವು ಇಳಿಯುತ್ತಿದೆ ಎನ್ನತಕ್ಕ ವಿಚಾರ. ಅದು ಎಷ್ಟರಮಟ್ಟಿಗೆ ನಿಜವೋ ಅದರ ಬಗ್ಗೆ ನಾನು ಇವತ್ತು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಅನೇಕ ಸದಸ್ಯರುಗಳು ಯಾವ ರೀತಿಯಿಂದಲೂ ಅಪೇಕ್ಷೆ ಪಡಲಾರದಂತೆ, ತಮಗೆ ವೈಯಕ್ತಿಕವಾಗಿ ನಿರುತ್ಸಾಹವಿದೆ ಎನ್ನುವುದನ್ನು ತೋರಿಸಿಕೊಳ್ಳದೆ ಮತ್ತು ಈ ಲೆಜಿಸ್‌ಲೇಚರ್ ಮತ್ತು ಪಾರ್ಲಿಮೆಂಟ್‌ನ ಗುಣಮಟ್ಟವು ದಿನೇ ದಿನೆ ಕಡಿಮೆಯಾಗುತ್ತಿದೆ ಎನ್ನತಕ್ಕ ವಿಚಾರ ಪತ್ರಿಕೆಗಳನ್ನು ಓದುವುದರಿಂದ ನನಗೆ ಗೊತ್ತಾಗುತ್ತಿದೆ.